# ವಿವೇಕಾನಂದ ಕಾಮತ್



ಚಿಕ್ಕಮಗಳೂರು ಜಿಲ್ಲೆಯ ಕಳಸದ ವಿವೇಕಾನಂದ ಕಾಮತ್ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದು, ಮೂವತ್ತು ವರ್ಷಗಳಿಂದ ಮಂಗಳೂರಿನಲ್ಲಿಯೇ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಸ್ವತಂತ್ರ ಉದ್ಯೋಗಿ. ಕಥೆಗಾರರಾಗಿ, ಕಾದಂಬರಿಕಾರರಾಗಿ ಕನ್ನಡದ ಓದುಗರಿಗೆ ಪರಿಚಿತರು. ಅರವತ್ತನಾಲ್ಕು ಕಾದಂಬರಿಗಳನ್ನು ಬರೆದಿದ್ದಾರೆ ಎನ್ನುವುದು ಆ ಪ್ರಕಾರದಲ್ಲಿ ಅವರ ಸಿದ್ಧಿ ಹಾಗೂ ಒಲವಿಗೆ ಉದಾಹರಣೆಯಂತಿದೆ. ಈ ಮುನ್ನ ವಿವೇಕಾನಂದರ 'ಅತಿಕ್ರಮಣ' (2002), 'ನೆಲಮುಗಿಲು' (2012), 'ಸ್ವೀಕಾರ' (2017) ಕಾದಂಬರಿಗಳು 'ಸುಧಾ'ದಲ್ಲಿ ಪ್ರಕಟಗೊಂಡಿವೆ. ಈ ಸಂಚಿಕೆಯಿಂದ ಪ್ರಕಟಗೊಳ್ಳುತ್ತಿರುವ 'ಅಜ್ಞಾತ' ತನ್ನ ವಿಶಿಷ್ಟ ವಸ್ತು ಹಾಗೂ ನಿರೂಪಣೆಯ ಕಾರಣದಿಂದ ಸಹೃದಯರಿಗೆ ಇಷ್ಟವಾಗುವಂತಿದೆ.

ನೆಲೆಸಿದವರೂ ಸೋದಾಪುರದಲ್ಲಿ ಇದ್ದಾರೆ. ಮಿನಾಲಿ ಮತ್ತು ಸಾರಂಗನನ್ನು ಅಲ್ಲೇ ಮರದ ನೆರಳಲ್ಲಿ ಕುಳ್ಳಿರಿಸಿ ಸಿಕ್ಕಿಸಿಕ್ಕಿದವರ ಬಳಿ ಉಳಿಯಲು ಬಾಡಿಗೆ ಕೋಣೆ ದೊರಕುವುದೇ ಎಂದು ವಿಚಾರಿಸತೊಡಗಿದ. ಬಿಟ್ಟು ಬಂದ ಊರಿನಲ್ಲಿ ಬಹುತೇಕ ಹೊಸ ಮುಖಗಳೇ ಕಂಡವು. ತನ್ನ ಊರಿಗೆ ತಾನೇ ಅಪರಿಚಿತನೆಂಬಂತಾಗಿದ್ದ. ಗುರುತು, ಪರಿಚಯ ಹಿಡಿದು ಹೋಗುವಷ್ಟು ಸಮಯವಿರಲಿಲ್ಲ.

ಕಾರಣ ಮಿನಾಲಿಯ ಪರಿಸ್ಥಿತಿ ಬಹುತೇಕ ಬಿಗಡಾಯಿಸಿತ್ತು. ಯಾರೋ ಊರ ಹೊರಗೆ, ಕಾರ್ಮಿಕರೇ ಉಳಿಯುವಂಥ ಕೋಣೆಗಳು ಬಾಡಿಗೆಗೆ ಸಿಗುತ್ತವೆ ಎಂದು ತಿಳಿಸಿದರು. ಸಂಚಾರದ ವ್ಯವಸ್ಥೆ ಏಕೆ, ಆಧುನಿಕತೆಯ ಸೋಂಕೇ ತಗಲದಂಥ ಹಳ್ಳಿಯಾಗಿತ್ತು ಸೋದಾಪುರ. ತೀರಾ ನಿರ್ಲಕ್ಷಿತ ಮತ್ತು ತೀರಾ ಕೆಳವರ್ಗದ ಸಂಪಾದನೆ ಇರುವವರ ವಾಸ ಸ್ಥಳವಾಗಿತ್ತದು. ತುರ್ತಿಗೆ ದೊರೆತ ಎತ್ತಿನ ಗಾಡಿ ಬಾಡಿಗೆಗೆ ಮಾತನಾಡಿ ಮಿನಾಲಿಯನ್ನು ಎತ್ತಿ ಗಾಡಿಯಲ್ಲಿ ಮಲಗಿಸಿ, ಸಾರಂಗನೊಡನೆ ಆತ ತಿಳಿಸಿದ ವಿಳಾಸ ಬಂದು ತಲುಪಿದ. ಕೋಣೆ ಏನೋ ಸಿಕ್ಕಿತು. ಆದರೆ ತೀರಾ ಕಳಪೆ ದರ್ಜೆ ಮತ್ತು ಕನಿಷ್ಠ ಸೌಲಭ್ಯದಾಗಿತ್ತು. ಅಗತ್ಯಕ್ಕೆ ಒಂದು ಸೂರು ಸಿಕ್ಕಿತೆಂದಷ್ಟೇ ಸಮಾಧಾನ.

ಮಾಲೀಕ ಬಂದು ಅಡ್ವಾನ್ಸು ಪಡೆದು, ನಿಬಂಧನೆಗಳನ್ನು ತಿಳಿಸಿ ಹೋದ. ದೇಹಬಾಧೆಗೆ ಆ ಕೋಣೆಯ ಆಚೆ ಹರಿವ ಹೊಳೆಯ ತೀರಕ್ಕೋ ಅದರಾಚೆ ಇದ್ದ ಕಾಡಿಗೋ ಹೋಗಬೇಕಿತ್ತು. ಅದು ಬಿಟ್ಟರೆ ಬೇರೆ ಗತ್ಯಂತರವೂ ಇರಲಿಲ್ಲ. ತನ್ನ ಪತ್ನಿಯ ಸ್ಥಿತಿಯನ್ನು ಆ ಮಾಲೀಕನಿಗೆ ತಿಳಿಸಿದಾಗ ಆತನೇ ಒಬ್ಬ ಫಕೀರ ಪಂಡಿತನ ಹೆಸರು ನಮೂದಿಸಿದ. ರಾತ್ರಿ ಕಳೆದು ಬೆಳಗಾದರೆ ಸಾಕೆನ್ನುವಂಥ ಸ್ಥಿತಿ. ಮಿನಾಲಿಯನ್ನು ಮರುದಿನ ಬೆಳಿಗ್ಗೆಯೇ ಆ ಫಕೀರನ ಬಳಿ ಕರೆದೊಯ್ದು ತೋರಿಸಿದ ಕಾಯಕನಾಥ. ಮಿನಾಲಿಗೆ ಯಾವುದೋ ಕೆಟ್ಟ ಗಾಳಿ ಬಿದ್ದಿದೆಯೆಂದೂ, ಅದನ್ನು ತೆಗೆಸಲು ಇಪ್ಪತ್ತು ದಿನದ ಗಡವು ನೀಡಿ ಖರ್ಚು ತಿಳಿಸಿದ. ಕಾಯಕನಾಥನಿಗೆ ಪತ್ನಿ ಬದುಕುಳಿದರೆ ಸಾಕೆನ್ನುವಂತಾಗಿತ್ತು. ಆ ಫಕೀರ ಹೇಳಿದ್ದೆಲ್ಲವನ್ನೂ ಕಣ್ಮುಚ್ಚಿ ಒಪ್ಪಿದ. ಇಪ್ಪತ್ತು ದಿನಗಳ ಗಡುವಿನೊಳಗೆ ಮಿನಾಲಿಯೇ ಉಳಿಯಲಿಲ್ಲ. ಒಂದು ದಿನ ಬೆಳಿಗ್ಗೆ ಅವಳು ಕಣ್ಣೇ ಬಿಡಲಿಲ್ಲ. ಇವರ ಬದುಕಿಗೆ ವಿದಾಯ ಹೇಳಿ ಅವಳು ಬಾರದ ಲೋಕಕ್ಕೆ ಹೊರಟೇ ಹೋಗಿದ್ದಳು. ಇದೊಂದು ಚೇತರಿಕೊಳ್ಳಲಾಗದ ಘಟನೆಯಾಗಿ ಕಾಯಕನಾಥನನ್ನು ಕಾಡಿತ್ತು. ಅವನ ಜೀವನದಲ್ಲಿ ಬಂದು ಆರು ವರ್ಷಗಳ ಸಹಬಾಳ್ವೆ ನಡೆಸಿ ತನ್ನ ಪಾತ್ರ ಮುಗಿಯಿತೆಂಬಂತೆ ಸರಿದುಹೋಗಿದ್ದಳು. ಆದರೆ ಅವಳು ಆ ಸಹಜೀವನದಲ್ಲಿ ಅವನನ್ನು ಒಂಟಿಯಾಗಿ ಬಿಟ್ಟು ಉಂಟು ಮಾಡಿದ ಬರಡನ್ನು ಆತ ಇಡೀ ಜೀವನವನ್ನು ತಣಿಸುವ ಸಿಹಿನೀರಿನ ಒರತೆಯಾಗಿತ್ತು ಕಾಯಕನಾಥನ ಪಾಲಿಗೆ. ಒಂದು ದಿನ ಆ ಒತ್ತಡದ ಕೆಲಸವನ್ನು ಶಪಿಸಲಿಲ್ಲ, ದೂರಲಿಲ್ಲ, ಕಾಯಕವೇ ಕೈಲಾಸವೆಂದು ಪತಿಯ ಹೆಗಲಿಗೆ ಹೆಗಲು ಕೊಟ್ಟು ನಡೆದವಳು. ಅವನಿಗೆ ಬೇಕೆನಿಸುವ ಖಾದ್ಯವನ್ನು ವಾರಾಂತ್ಯದಲ್ಲಿ ಇಷ್ಟಪಟ್ಟು ಮಾಡಿ ಬಡಿಸುವಳು. ಆಸೆಪಟ್ಟ ಸಿನಿಮಾ ಜೊತೆಗೆ ಹೋಗಿ ನೋಡುವವರು. ಒಟ್ಟಿನಲ್ಲಿ ಅವನಿಚ್ಛೆಗನುಗುಣವಾಗಿ ಬದುಕು ಕಳೆದವಳು ಇಂದು ಅವನ ಪಾಲಿಗೆ ನೆನಪಾಗಿ ಮಾತ್ರ ಉಳಿದಿದ್ದಳು. ಮಗ ಸಾರಂಗನೂ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ. ಸತ್ಯವನ್ನು ಅರಗಿಸಿಕೊಳ್ಳಲೇಬೇಕಿತ್ತು. ಕರ್ನಾಟಕಕ್ಕೆ ಹೋಗಿ ಪುನಃ ಕೂಲಿ ಕೆಲಸ ಮಾಡುವುದು ಬೇಡವೆನಿಸಿತು. ಅಲ್ಲೇ ಸಣ್ಣಪುಟ್ಟ ನೌಕರಿ ಮಾಡುತ್ತ ದಿನ ಕಳೆಯತೊಡಗಿದ. ಬದುಕಿನಲ್ಲಿ ಮುಂಚಿನ ಖುಷಿ, ಸ್ವಾದ ಇರದೇ ಹೋದರೂ ಮಗನ ಮುಖ ನೋಡಿ ಬದುಕನ್ನು ಸಹ್ಯವೆನಿಸಿಕೊಂಡು ದಿನ ದೂಡತೊಡಗಿದ.

ಕಾಯಕನಾಥನ ಹೆತ್ತವರು ತೀರಿಕೊಂಡಿದ್ದರು. ಅವನು ತನ್ನ ಹೆತ್ತವರಿಗೆ ಹದಿಮೂರನೇ ಮಗು. ಅವನ ಅಣ್ಣತಮ್ಮಂದಿರು, ಅಕ್ಕತಂಗಿಯರು ಎಲ್ಲಾ ತಂತಮ್ಮ ಸಂಸಾರದಲ್ಲಿ ವ್ಯಸ್ತರು. ಇವನ ಗೊಡವೆ ಯಾರಿಗೂ ಇರಲಿಲ್ಲ. ಮಿನಾಲಿಯನ್ನು ಕಟ್ಟಿಕೊಂಡು ಊರು ಬಿಟ್ಟ ಬಳಿಕವಂತೂ ಸಂಪರ್ಕವೇ ಕಡಿದುಹೋಗಿತ್ತು. ಸಾರಂಗ ಒಂಟಿಯಾಗಿ ಅಲ್ಲಿಲ್ಲಿ ಅಲೆದಾಡುತ್ತ ದಿನ ಕಳೆದರೆ ಕಾಯಕನಾಥ ಸಿಕ್ಕ ಕೂಲಿ ಕೆಲಸ ಮಾಡಿ ಸಂಪಾದಿಸುತ್ತಿದ್ದ. ಮಂಗಳೂರಿನಲ್ಲಿರುವಂತೆ ನಿತ್ಯ ಕೆಲಸವೇನಿರಲಿಲ್ಲ. ಬಸ್ಸು ನಿಲ್ದಾಣದ ಬಳಿ ಬೆಳಿಗ್ಗೆ ಹೋಗಿ ನಿಂತರೆ, ಅವಶ್ಯಕವಿದ್ದವರು ಸಂಬಳ ನಿಗದಿ ಮಾಡಿ ಕರೆದೊಯ್ದು ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಅಲ್ಲೇನೂ ಅಂಥ ದೊಡ್ಡ ಪಗಾರ ಸಿಗುತ್ತಿರಲಿಲ್ಲವಾದರೂ ಅವಶ್ಯಕತೆಗಳು ನೀಗುವಷ್ಟು ಸಂಪಾದನೆ ದೊರಕುತ್ತಿತ್ತು. ಆಸಕ್ತಿ ಇಲ್ಲದ ದಿನ ಕೋಣೆಯಲ್ಲಿ ಮಲಗೇ ದಿನ ಕಳೆಯುತ್ತಿದ್ದ. ಪ್ರತಿದಿನ ಅವನೇ ಅಡುಗೆ ಮಾಡಿ ಹಾಕುತ್ತಿದ್ದ. ಸಾರಂಗ ಆಡಿ, ಹಸಿವಾದಾಗ ಕೋಣೆಗೆ ಬಂದು ಏನಿದೆಯೋ ತಿಂದು ಪುನಃ ಆಡಲು ಹೋಗುತ್ತಿದ್ದ. ಈಗ ಅವನಿಗೆ ಅಲ್ಲಿನ ಆಸುಪಾಸಿನಲ್ಲಿ ಪರಿಚಿತ ತನ್ನದೇ ವಯಸ್ಸಿನ ಮಕ್ಕಳು ಸ್ನೇಹಿತರಾಗಿದ್ದರು. ಅವನಿದ್ದ ಕೋಣೆಯ ಆಚೆ ಸಣ್ಣ ಹೊಳೆ ಹರಿಯುತ್ತಿತ್ತು. ಅದನ್ನು ದಾಟಿ ಸ್ವಲ್ಪ ದೂರ ನಡೆದರೆ ಅಲ್ಲಿ ಸಣ್ಣ ಕಾಡಿತ್ತು. ಇವರೆಲ್ಲಾ ಸೇರಿಕೊಂಡು ಅಲ್ಲಿಗೆ ಆಡಲು ಹೋಗುತ್ತಿದ್ದರು. ಮಿನಾಲಿ ಅಗಲಿ ಮೂರು ತಿಂಗಳು ಕಳೆದಿತ್ತು. ಒಂದು ದಿನ ಇವನು ಕೆಲಸ ಮಾಡುತ್ತಿದ್ದ ಜಾಗಕ್ಕೆ ಅವನ ಪಕ್ಕದ ಮನೆಯವ ಧಾವಿಸಿ ಬಂದು ಹೇಳಿದ್ದ, "ನಿನ್ನ ಮಗನಿಗೆ ಹಾವು ಕಚ್ಚಿದೆ ಬೇಗ ಬಾ..."

ಇದ್ದ ಕೆಲಸ ಬಿಟ್ಟು ಕಾಯಕನಾಥ ಒಂದೇ ಉಸಿರಿಗೆ ಮನೆಯ ಕಡೆಗೆ ಓಡಿದ್ದ. ಸಾರಂಗ ಹೊಳೆ ದಾಟಿ ಕಾಡಿನ ಕಡೆ ಹೋದಾಗ ಹಾವು ಕಡಿದಿತ್ತು. ಅವನ ಸ್ನೇಹಿತರು ಹೆದರಿ ಅಲ್ಲಿಂದ ಓಡಿ ಬಂದಿದ್ದರು. ಸಾರಂಗ ಆ ಕಾಲು ಹಿಡಿದುಕೊಂಡೇ ಕೋಣೆಯ ಬಳಿ ಬರುವ ಹೊತ್ತಿಗೆ ವಿಷ ಮೈಗೇರಿಯಾಗಿತ್ತು, ಕಾಯಕನಾಥ ಪ್ರಜ್ಞೆ ಕಳೆದುಕೊಂಡ ಮಗನನ್ನು ಎತ್ತಿಕೊಂಡು ಆಸ್ಪತ್ರೆಯ ಕಡೆಗೆ ಧಾವಿಸಿದ. ಸಣ್ಣ ಹಳ್ಳಿಯಾದ ಅಲ್ಲಿ ಒಂದು ಸರಿಯಾದ ವಾಹನವಿರಲಿಲ್ಲ. ಸಮಯ ಹಾಳು ಮಾಡುವಂತಿರಲಿಲ್ಲ. ಕಾಯಕನಾಥ ಪ್ರಾಣ ಕಳೆದುಕೊಳ್ಳುತ್ತಿದ್ದ ಮಗನನ್ನು ಹೆಗಲ ಮೇಲೆ ಎತ್ತಿಕೊಂಡು ಒಂದೇ ಸಮನೇ ಓಡತೊಡಗಿದ. ಅವನ ಕಂಗಳಲ್ಲಿ ಧಾರಾಕಾರ ನೀರು. ಈಗಷ್ಟೇ ಪತ್ನಿಯನ್ನು ಕಳೆದುಕೊಂಡ ಶೋಕ ಆರಿರಲಿಲ್ಲ, ಈಗ ಸಾವಿನ ದವಡೆಯಲ್ಲಿರುವ ಮಗನನ್ನು ಕಳೆದುಕೊಳ್ಳಲು ಅವನು ಸಿದ್ಧನಿರಲಿಲ್ಲ. ಸಾರಂಗ ಆಗಲೇ ಒಂದು ಹೆಜ್ಜೆ ಬದುಕಿನಾಚೆ ಇರಿಸಿದ್ದಾಗಿತ್ತು. ಎಷ್ಟೇ ದಾಪುಗಾಲಿಕ್ಕಿ ಧಾವಿಸಿದರೂ ಮಗನ ಮೈಗೇರುತ್ತಿದ್ದ ವಿಷದ ವೇಗವನ್ನು ಮೀರುವ ಶಕ್ತಿ ಅವನ ಚಾಲನೆಗಾಗಲಿಲ್ಲ.

'ಸಾರಂಗ ಸಾರಂಗ.... ಮಾತನಾಡು.. ಮಾತನಾಡು ಬೇಟಾ..." ಕಾಯಕನಾಥ ರೋದಿಸುತ್ತಾ ದಗ್ಧನಾಗಿ ಅವನನ್ನು ಎಚ್ಚರವಾಗಿರಿಸಲು ಯತ್ನಿಸುತ್ತಾ, ದೇಹ ಒಡಂಬಡದಿದ್ದರೂ ಸೋಲದೇ ರಸ್ತೆಯ ಬದಿಗೆ ಹುಚ್ಚನಂತೆ ಕಿ.ಮೀ.ಗಟ್ಟಲೆ ಓಡುತ್ತಲೇ ಇದ್ದ. ಒಂದೊಂದು ಕ್ಷಣವೂ ಅವನ ಪಾಲಿಗೆ ಅಮೂಲ್ಯವಾಗಿತ್ತು. ಆಸ್ಪತ್ರೆಯನ್ನು ಅದಷ್ಟು ಬೇಗ